sdmimd

## Vijaya Karnataka (Kannada Daily)

Date: March 23, 2013 Page No.3

Edition: Mysore Language: Kannada




ಮೈಸೂರಿನ ಧರ್ಮಸ್ಥಳ ಮಂಜುನಾಥೇಶ್ವರ ಇನ್‌ಸ್ಟಿಟ್ಯೂಟ್ ಫಾರ್ ಮ್ಯಾನೇಜ್‌ಮೆಂಟ್ ಡೆವೆಲಪ್‌ಮೆಂಟ್ ಶುಕ್ರವಾರ ಸಂಸ್ಥೆಯಲ್ಲಿ ಆಯೋಜಿಸಿದ್ದ ಘಟಿಕೋತ್ಸವದಲ್ಲಿ ನಟನ್ಸ್ ಶರ್ಮ, ಎಸ್. ಅರುಣ್ ಶಾನ್, ಪ್ರಿಯಾ ಬಟ್ರಾ, ನೇಹಾ ಮಹೇಶ್ವರಿ, ಎಸ್.ಕೆ.ಪದ್ಮಿನಿ, ಜತಾಕಿಯಾ ಜಯಕುಮಾರ್ ವಿವಿಧ ವಿಭಾಗಗಳಲ್ಲಿ ಚಿನ್ನದ ಪದಕ ಪಡೆದರು. ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆ ಪದಕ ವಿತರಿಸಿದರು. ಪಿಜಿಡಿಎಂ ವಿಭಾಗ ಅಧ್ಯಕ್ಷೆ ಡಾ. ನೀತು ಗಣಪತಿ, ಡಾ.ಎಚ್. ಗಾಯತ್ರಿ, ಪ್ರೊ. ಎಸ್. ಪ್ರಭಾಕರ್, ಪ್ರಸನ್ನಚಂದ್ರ, ಡಾ. ಸುರೇಂದ್ರಕುಮಾರ್, ಡಾ. ಪರಶುರಾಮನ್, ಡಾ. ಪ್ರಸನ್ನಚಂದ್ರ ಇದ್ದರು.

# ‘ಸಮಾನತೆ’ಯೇ ಪರಿಹಾರ

ಮೈಸೂರು: ಭಾರತ ಎದುರಿಸುತ್ತಿರುವ ಎಲ್ಲ ಸಾಮಾಜಿಕ ಸಮಸ್ಯೆಗಳಿಗೆ ‘ಸಮಾನತೆ’ಯನ್ನು ಜಾರಿಗೆ ತರುವುದೆ ಪರಿಹಾರ ಎಂದು ಟಾಟಾ ಸ್ಟೀಲ್‌ನ ಉಪಾಧ್ಯಕ್ಷ ಬಿ. ಮುತ್ತುರಾಮನ್ ಅಭಿಪ್ರಾಯಪಟ್ಟರು.

ನಗರದ ಧರ್ಮಸ್ಥಳ ಮಂಜುನಾಥೇಶ್ವರ ಇನ್‌ಸ್ಟಿಟ್ಯೂಟ್ ಫಾರ್ ಮ್ಯಾನೇಜ್‌ಮೆಂಟ್ ಡೆವಲಪ್‌ಮೆಂಟ್ ಸಂಸ್ಥೆಯಲ್ಲಿ ಶುಕ್ರವಾರ ಆಯೋಜಿಸಿದ್ದ ಘಟಿಕೋತ್ಸವದಲ್ಲಿ ಮಾತನಾಡಿ, ಭಾರತ ಬಡತನ, ಅನಕ್ಷರತೆ, ಜಾತೀಯತೆ ಈ ರೀತಿ ಅನೇಕ ಸಾಮಾಜಿಕ ಸಮಸ್ಯೆಗಳನ್ನು ಎದುರಿಸುತ್ತಿದೆ. ಇವುಗಳನ್ನು ದೂರಗೊಳಿಸಬೇಕಾದರೆ ಸಮಾನತೆಯನ್ನು ಆಚರಣೆಗೆ ತರಬೇಕು ಎಂದು ಸಲಹೆ ನೀಡಿದರು.

ಕೈಗಾರೀಕರಣದ ನಂತರ ಎಲ್ಲವೂ ಮೆರಿಟ್ ಆಧಾರದಲ್ಲಿ ನಡೆಯುತ್ತಿದೆ. ಕಂಪನಿಗಳಿಗೆ ಉದ್ಯೋಗಿಗಳನ್ನು ಆಯ್ಕೆ ಮಾಡುವಾಗ ಅರ್ಹತೆಯ ಮಾನದಂಡದ ಸಮಸ್ಯೆ ತಲೆದೋರುತ್ತದೆ. ಆಗ ಶಾಲಾ- ಕಾಲೇಜುಗಳಲ್ಲಿ ಗಳಿಸಿದ ಅಂಕ, ಕಾರ್ಯಕ್ಷಮತೆ,, ಆತನ ನಿರ್ವಹಣಾ ಸಾಮರ್ಥ್ಯ ಸೇರಿದಂತೆ ಇನ್ನಿತರ ಮಾನ ದಂಡಗಳನ್ನು ಪರಿಶೀಲನೆ ಮಾಡಲಾಗುತ್ತದೆ. ಆದರೆ ಇವೆಲ್ಲವನ್ನೂ ಮೀರಿದ ಅರ್ಹತೆ ಆತನು ಬೆಳೆದು ಬಂದ ಸನ್ನಿವೇಶ ದಿಂದ ಲಭಿಸುತ್ತದೆ. ಸಮಾಜದಲ್ಲಿನ ನೋವು-ನಲಿವು, ಸಾಮಾನ್ಯ ಪ್ರಜ್ಞೆ, ಸಾಮಾಜಿಕ ತುಡಿತಗಳು ಆತನಲ್ಲಿ ವಿಶೇಷ ವ್ಯಕ್ತಿತ್ವವನ್ನು ಸೃಷ್ಟಿಸುತ್ತವೆ. ಈ ಸ್ಪರ್ಶವಿದ್ದವರು ಸಂಸ್ಥೆಯ ಬೆಳವಣಿಗೆಗೆ ಕಾರಣರಾಗಬಲ್ಲರು ಎಂದು ಹೇಳಿದರು.

ಇದಕ್ಕೂ ಮುನ್ನ ಕಾಲೇಜಿನ 167 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು. ಇವರ ಪೈಕಿ ನಟನ್ಸ್ ಶರ್ಮ, ಎಸ್. ಅರುಣ್ ಶಾನ್, ಪ್ರಿಯಾ ಬಟ್ರಾ, ನೇಹಾ ಮಹೇಶ್ವರಿ, ಎಸ್.ಕೆ. ಪದ್ಮಿನಿ, ಜತಾಕಿಯಾ ಜಯಕುಮಾರ್ ಅವರು ನಾನಾ ವಿಭಾಗಗಳಲ್ಲಿ ಚಿನ್ನದ ಪದಕ ಪಡೆದರು. ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ. ವೀರೇಂದ್ರ ಹೆಗ್ಗಡೆ ಪದಕ ವಿತರಿಸಿದರು.

ಪಿಜಿಡಿಎಂ ವಿಭಾಗ ಅಧ್ಯಕ್ಷೆ ಡಾ. ನೀತು ಗಣಪತಿ, ಡಾ.ಎಚ್. ಗಾಯತ್ರಿ, ಪ್ರೊ. ಎಸ್. ಪ್ರಭಾಕರ್, ಪ್ರಸನ್ನಚಂದ್ರ, ಡಾ. ಸುರೇಂದ್ರಕುಮಾರ್, ಡಾ. ಪರಶುರಾಮನ್, ಡಾ. ಪ್ರಸನ್ನಚಂದ್ರ ಇದ್ದರು.